ಬಂದಿದೆಯೇ?

ಈ) ಹಾಗಿದ್ದಲ್ಲಿ ಅತಿಕ್ರಮಿಸುತ್ತಿರುವವರ ವಿವರಗಳನ್ನು ಒದಗಿಸುವುದು?

ಉ) ಈ ರೀತಿ ಕೆರೆಯ ಜಾಗವನ್ನು ಅತಿಕ್ರಮಿಸುವುದನ್ನು ಸಂಬಂಧಿಸಿದ ಇಂಜನಿಯರ್‌ಗಳು ನೋಡುತ್ತಿದ್ದು, ಯಾವುದೇ ಕ್ರಮ ಜರುಗಿಸದಿರುವುದರಿಂದ, ನೀರಾವರಿ ಇಲಾಖೆಯು ಅತಿಕ್ರಮಣಗಾರರೊಂದಿಗೆ ಶಾಮೀಲಾಗಿರುವುದು ನಿಜವಲ್ಲವೆ?

ಊ) ಹಾಗಿದ್ದಲ್ಲಿ, ಸರ್ಕಾರದವರು ಅವರ ಮೇಲೆ ಉಗ್ರ ಕ್ರಮಗಳನ್ನು ಶೀಘ್ರವಾಗಿ ತೆಗೆದುಕೊಳ್ಳುವರೇ?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 20.64 ಹೆಕ್ಟೇರ್‌ಗಳು.

ಆ) ಸೇರಿದೆ.

ಇ) ಬಂದಿದೆ.

ಈ) ಖಾಸಗಿ ವ್ಯಕ್ತಿಗಳು-ಸುಮಾರು 8 ಎಕರೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ-ಸುಮಾರು 15 ಎಕರೆ ರೈಲ್ವೆ ಇಲಾಖೆ-ಸುಮಾರು 5 ಎಕರೆ

ಉ ಮತ್ತು ಊ) ಕೆರೆಯ ಜಾಗವನ್ನು ಅತಿಕ್ರಮಿಸಿ ಅಕ್ರಮ ಮಾಡಿರುವವರಿಗೆ ನೋಟಿಸನ್ನು ಜಾರಿ ಮಾಡಿ ಅವರನ್ನು ಅಲ್ಲಿಂದ ಎಬ್ಬಿಸಲು ಕ್ರಮ ತೆಗೆದುಕೊಳ್ಳಲು ಸಣ್ಣ ನೀರಾವರಿ ದಕ್ಷಿಣ ವಲಯದ ಮು.ಇಂ.ರವರಿಗೆ ಆದೇಶ ನೀಡಲಾಗಿದೆ. ನೀರಾವರಿ ಇಲಾಖೆಯು ಅತಿಕ್ರಮಣಗಾರರೊಂದಿಗೆ ಶಾಮೀಲಾಗಿರುವುದಿಲ್ಲ.

ವಿಷಯ: ಬೆಂಗಳೂರು ನೀರು ಸರಬರಾಜು ಹಾಗೂ ಒಳ ಚರಂಡಿ ಮಂಡಲಿಯ ಸಲಹಾ ಸಮಿತಿ

2832 (3970)

ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಪ್ರಜಾ ಪ್ರತಿನಿಧಿಗಳ ಸಭೆಯನ್ನು ಕರೆಯುವ ವ್ಯವಸ್ಥೆ ನಿಯಮ ಏನಾದರೂ ಇದೆಯೇ?

ಆ) ಹಾಗಿದ್ದ ಪಕ್ಷದಲ್ಲಿ ಎಷ್ಟು ದಿನಗಳಿಗೊಮ್ಮೆ ಸಭೆಯನ್ನು ಕರೆಯಬಹುದು?

ಶ್ರೀ ಅನಂತ್‌ನಾಗ್ (ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು):

ಅ) ಜಲಮಂಡಳಿಯ ಸೇವಾ ಠಾಣೆಯ ಮಟ್ಟದಲ್ಲಿ ಸ್ಥಳೀಯ ಶಾಸಕರು, ನಗರಪಾಲಿಕೆ ಸದಸ್ಯರು ಮತ್ತು ಸಾರ್ವಜನಿಕ ಪ್ರಮುಖರು ಒಳಗೊಂಡ ಸಲಹಾ ಸಮಿತಿ (ಕನ್ಸಲಟೇಟಿವ್ ಸಮಿತಿ) ರಚಿತವಾಗಿರುತ್ತದೆ.

ಆ) ಸಾಮಾನ್ಯವಾಗಿ ಪ್ರತಿ ತಿಂಗಳು ಒಮ್ಮೆ ಸಭೆ ಸೇರುವ ಪರಿಪಾಠ ಪಾಲಿಸಬೇಕಾಗುತ್ತದೆ.

ವಿಷಯ: ಚಿಕ್ಕಪೇಟೆ ವಿಧಾನ ಸಭಾಕ್ಷೇತ್ರದಲ್ಲಿ ಕಾಮಗಾರಿ ಕೆಲಸ ಸ್ಥಗಿತ.

2833 (3973)

ಶ್ರೀ ಪಿ.ಎನ್.ಪ್ರಕಾಶ (ಚಿಕ್ಕಪೇಟೆ): ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಯ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೊಳಪಡುವ ಅರ್ಕಾಟಿ ಶ್ರೀನಿವಾಸಚಾರ ರಸ್ತೆಯಕಾಮಗಾರಿ ಕೆಲಸಗಳನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಅನಂತ್‌ನಾಗ್ (ಬೆಂಗಳೂರು ಅಭಿವೃದ್ಧಿ ಸಚಿವರು):

ಅ) ಹೌದು

ಆ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇವರು ನೀರಿನ ಕೊಳಚೆ ಹಾಕಬೇಕಾಗಿದ್ದ ಕಾರಣ ಕಾಮಗಾರಿಯನ್ನು ಸ್ಥಗಿತಗೊಳಿಸಬೇಕಾಗಿತ್ತು. ದಿನಾಂಕ: 16-8-97ರಿಂದ ಕಾಮಗಾರಿಯು ಪುನರ್ ಪ್ರಗತಿಯಲ್ಲಿದೆ.

ವಿಷಯ: ಚಿಕ್ಕಪೇಟೆ ಕ್ಷೇತ್ರದಲ್ಲಿ ಒಳಚರಂಡಿ ಪೈಪುಗಳ ಬದಲಾವಣೆ

2834 (3971)

ಶ್ರೀ ಪಿ.ಎಸ್.ಪ್ರಕಾಶ್ (ಚಿಕ್ಕಪೇಟೆ): ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?